# ಹಬ್ಬಕ್ಕೆ ಮಾಲಿನ್ಯದ ಕಪ್ಪುಚುಕ್ಕೆ

**ಎಳೆಯ ಮಕ್ಕಳ ಹಾಗೂ ವೃದ್ಧರ ಆರೋಗ್ಯವನ್ನು ತೀವ್ರ ಹದಗೆಡಿಸುವ ಪಟಾಕಿ ಮತ್ತು ಸುಡುಮದ್ದುಗಳ ಹಾವಳಿಯನ್ನು ತಡೆಯಲು ಜನಜಾಗೃತಿ ಮೂಡಿಸುವ ಅಭಿಯಾನಕ್ಕೆ ಎಲ್ಲರೂ ಕೈಜೋಡಿಸಬೇಕಿದೆ.**


ಹಬ್ಬ ಎಂದರೆ ಸಂಭ್ರಮ. ಜೀವನದಲ್ಲಿ ಎಷ್ಟೇ ಕಷ್ಟ ನಷ್ಟಗಳಿರಲಿ, ಅವನ್ನೆಲ್ಲ ಮರೆತು ಖುಷಿ ಪಡಲು, ಧಾರ್ಮಿಕವಾಗಿ ಮನುಷ್ಯ ಸೃಷ್ಟಿಸಿಕೊಂಡಿರುವ ಸಂದರ್ಭ. ಕೆಲವು ಹಬ್ಬಗಳಿಗೆ ಆಧ್ಯಾತ್ಮಿಕ ಸ್ಪರ್ಶವಿದ್ದರೆ, ಇನ್ನು ಕೆಲವಕ್ಕೆ ಸಂಪ್ರದಾಯಗಳ ಮೆರುಗು. ಆದರೆ ಈ ಹಬ್ಬದ ಸಂಭ್ರಮದಲ್ಲಿ ನಮ್ಮ ಆರೋಗ್ಯಕ್ಕೆ ಕುತ್ತು ತರುವಂತಹ ಪರಿಸರ ಮಾಲಿನ್ಯವನ್ನು ಹೆಚ್ಚಿಸುವುದು ಥರವೆ? 'ದಸರಾ, ದೀಪಾವಳಿಯ ಹಬ್ಬದ ಸಂದರ್ಭದಲ್ಲಿ ಅಪಾಯಕಾರಿ ರಾಸಾಯನಿಕಗಳುಳ್ಳ ಪಟಾಕಿಗಳನ್ನು ಸಿಡಿಸುವ ಮೂಲಕ ಮಕ್ಕಳ, ವೃದ್ಧರ ಆರೋಗ್ಯಕ್ಕೆ ಕುತ್ತು ತರಲಾಗುತ್ತಿದೆ. ಇದನ್ನು ತಡೆಯಲು ಪಟಾಕಿಗಳನ್ನು ನಿಷೇಧಿಸಿ' ಎಂದು ಮನವಿ ಮಾಡಿ ದೆಹಲಿಯಲ್ಲಿ ಮೂವರು ಎಳೆಯ ಮಕ್ಕಳು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಅರ್ಜಿ ಈಗ ಹೊಸ ಚರ್ಚೆಯನ್ನು ಹುಟ್ಟು ಹಾಕಿದೆ. 14 ತಿಂಗಳ ಕಂದಮ್ಮನಿಂದ ಹಿಡಿದು ಆರು ವರ್ಷದವರೆಗಿನ ಮೂವರು ಮಕ್ಕಳ ಹೆಸರಿನಲ್ಲಿ ಅವರ ಪೋಷಕರು ಅರ್ಜಿ ಸಲ್ಲಿಸಿದ್ದಾರೆ. 'ಹಬ್ಬದ ಸಂದರ್ಭದಲ್ಲಿ ಭಾರೀ ಸುಡುಮದ್ದುಗಳನ್ನು ಸಿಡಿಸುವ ಮೂಲಕ ಪರಿಸರ ಮಾಲಿನ್ಯ ಉಂಟು ಮಾಡಲಾಗುತ್ತಿದೆ. ಇದು ಮಕ್ಕಳ ಆರೋಗ್ಯಪೂರ್ಣ ಪರಿಸರದ ಹಕ್ಕನ್ನು ಕಸಿದುಕೊಂಡಂತೆ' ಎನ್ನುವುದು ಅರ್ಜಿದಾರರ ವಾದ. 'ಎಳೆಯ ಮಕ್ಕಳು ಮತ್ತು ವಯಸ್ಸಾದವರು ಅಸ್ತಮಾ, ಶ್ವಾಸಕೋಶದ ಕಾಯಿಲೆಗಳು, ಕೆಮ್ಮು, ಬ್ರಾಂಕೈಟಿಸ್ ಮತ್ತು ನರರೋಗಗಳಿಂದ ಬಳಲುವುದು ಹೆಚ್ಚಾಗಿದೆ. ಅಪಾರ ಪ್ರಮಾಣದ ಸುಡುಮದ್ದುಗಳಿಂದಾಗಿ ಈ ರೋಗ ಇನ್ನಷ್ಟು ಉಲ್ಬಣಗೊಳ್ಳುತ್ತಿದೆ. ಎಳೆಯರು ಉಸಿರಾಡಲೂ ತೊಂದರೆ ಪಡಬೇಕಾಗುತ್ತದೆ' ಎಂದು ಅರ್ಜಿಯಲ್ಲಿ ನೋವು ತೋಡಿಕೊಳ್ಳಲಾಗಿದೆ. ಸುಪ್ರೀಂಕೋರ್ಟ್ ಪೀಠವು, ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಜತೆಗೆ, ವಾಣಿಜ್ಯ–ಉದ್ಯಮ, ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷಾ ಸಚಿವಾಲಯಕ್ಕೂ ಉತ್ತರಿಸಲು ನೋಟಿಸ್ ಜಾರಿ ಮಾಡಿದೆ.

ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆ ದೆಹಲಿಯನ್ನು 'ಜಗತ್ತಿನ ಅತ್ಯಂತ ಮಾಲಿನ್ಯಭರಿತ ನಗರ' ಎಂದು ಹೆಸರಿಸಿದೆ. ಧಾರ್ಮಿಕ ಗ್ರಂಥಗಳಲ್ಲಿ ದೀಪಾವಳಿಯನ್ನು 'ಬೆಳಕಿನ ಹಬ್ಬ' ಎಂದು ವರ್ಣಿಸಲಾಗಿದೆಯೇ ಹೊರತು, ಎಲ್ಲೂ ಪಟಾಕಿ, ಸುಡುಮದ್ದುಗಳನ್ನು ಸಿಡಿಸುವ ಹಬ್ಬ ಎಂದು ವರ್ಣಿಸಿಲ್ಲ. ಈ ಹಿನ್ನೆಲೆಯಲ್ಲಿ ಪುಟಾಣಿಗಳ ಅರ್ಜಿಯನ್ನು ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿಸಿರುವುದು ಮಹತ್ವದ್ದು. ಹಾಗೆ ನೋಡಿದರೆ ಶಬ್ದಮಾಲಿನ್ಯ ಮತ್ತು ಪರಿಸರ ಮಾಲಿನ್ಯದ ತಡೆ ರಾಜ್ಯ ಸರ್ಕಾರದ ಕೆಲಸ. ಆದರೆ ಯಾವ ರಾಜ್ಯಗಳೂ ಈ ನಿಟ್ಟಿನಲ್ಲಿ ಕಠಿಣ ಕಾನೂನುಗಳನ್ನು ಜಾರಿಗೊಳಿಸಿಲ್ಲ. 2005ರಲ್ಲೇ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಲ್ಲಿ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಪಟಾಕಿ ಸಿಡಿಸುವುದನ್ನು ನಿಷೇಧಿಸಿದೆ. ಜತೆಗೆ, ಪಟಾಕಿಗಳ ಶಬ್ದದ ಮಟ್ಟ ಮತ್ತು ರಾಸಾಯನಿಕಗಳ ಮಿಶ್ರಣಗಳನ್ನು ನಿರ್ಧರಿಸುವ ಮಾನದಂಡಗಳನ್ನೂ ಬಿಗುಗೊಳಿಸಿದೆ. 'ಶಬ್ದ ಮಾಲಿನ್ಯವನ್ನು ಸಾರ್ವಜನಿಕ ಕಿರುಕುಳ ಎಂದು ಪರಿಗಣಿಸಿ, ಭಾರತೀಯ ದಂಡಸಂಹಿತೆಯ ಸೆಕ್ಷನ್ 268, 290 ಮತ್ತು 291ರ ಪ್ರಕಾರ ಮೊಕದ್ದಮೆ ದಾಖಲಿಸಬೇಕು. ಇಂತಹ ಸಂದರ್ಭಗಳಲ್ಲಿ ಕೋರ್ಟ್ ಕೂಡಾ ಮಧ್ಯೆಪ್ರವೇಶಿಸಬಹುದು' ಎಂದು ಸುಪ್ರೀಂಕೋರ್ಟ್ ತೀರ್ಪು ಸ್ಪಷ್ಟಪಡಿಸಿದೆ.

ಪಟಾಕಿ ಮತ್ತು ಸುಡುಮದ್ದುಗಳ ನಿಯಂತ್ರಣಕ್ಕೆ ಪ್ರತ್ಯೇಕ ಕಾಯ್ದೆಯೇನೂ ನಮ್ಮಲ್ಲಿಲ್ಲ. ಈಗ ಇರುವ 1884ರ ಸ್ಫೋಟಕ ಕಾಯ್ದೆ ಅಡಿಯಲ್ಲಿ ಎಲ್ಲ ರೀತಿಯ ಸ್ಫೋಟಕಗಳೂ ಬರುತ್ತವೆ. ಪರಿಸರ ಸಂರಕ್ಷಣಾ ಕಾಯ್ದೆ (1986) ಮತ್ತು ಶಬ್ದ ಮಾಲಿನ್ಯ (ನಿಯಮ ಮತ್ತು ನಿಯಂತ್ರಣ) 2000 ಕಾಯ್ದೆಗಳ ಅಡಿಯಲ್ಲಿ ಪಟಾಕಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬಹುದಾದರೂ ಬಹುತೇಕ ಅಧಿಕಾರಿಗಳು ಮತ್ತು ಜನರಿಗೂ ಅದರ ಅರಿವಿದ್ದಂತಿಲ್ಲ. ಪಟಾಕಿಗಳಲ್ಲಿ ಶಬ್ದ ಮಾಡುವ ಪಟಾಕಿ ಮತ್ತು ಬೆಳಕು/ಬಣ್ಣ ಉಗುಳುವ ಪಟಾಕಿ ಎಂದು ವರ್ಗೀಕರಣ ಮಾಡಿ ನಿಯಮಗಳನ್ನು ಜಾರಿಗೆ ತರುವಂತೆ ಆಗ ಸುಪ್ರೀಂಕೋರ್ಟ್ ಸ್ಫೋಟಕಗಳ ಇಲಾಖೆಗೆ ಸೂಚಿಸಿದ್ದರೂ, ಆ ನಿಟ್ಟಿನಲ್ಲಿ ಯಾವುದೇ ಕೆಲಸ ಆಗಿಲ್ಲ.

ಜನಜಾಗೃತಿ ಮೂಡಿಸುವುದೇ ಇದಕ್ಕಿರುವ ಸುಲಭ ಪರಿಹಾರ. ಬೆಂಗಳೂರು ನಗರದಲ್ಲಿ ಜನಜಾಗೃತಿ ಮೂಡಿಸಿದ್ದರಿಂದಲೇ ಕಳೆದ ವರ್ಷದ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿಗಳ ಬಳಕೆ ಶೇಕಡಾ 32ರಷ್ಟು ಕಡಿಮೆಯಾಗಿರುವುದು ಇಲ್ಲಿ ಉಲ್ಲೇಖಾರ್ಹ. ಬೆಂಗಳೂರು ಈಗಾಗಲೆ 'ಅಸ್ತಮಾ ರಾಜಧಾನಿ' ಎಂದು ಹೆಸರು ಪಡೆದಿದ್ದು, ಈ ಸಲವೂ ಈ ನಿಟ್ಟಿನಲ್ಲಿ ಜನರನ್ನು ಎಚ್ಚರಿಸುವ ಕೆಲಸ ಭರದಿಂದ ನಡೆಯಬೇಕಿದೆ.

**■ ಬಿ.ಎಂ.ಹನೀಫ್**



ಈಶ್ವರ್